ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Tuesday, the 29th June 1982, Ashada 8, 1904 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI K. H. RANGANATH) in the Chair.]

STARRED QUESTIONS

(to which oral answers were given)

Revenue Derived from Motor Vehicle Tax

813 SRI M. S. ATHMANANDA (Mandya)—Will the Minister for Transport and Minor Irrigation be pleased to state :—

(a) the annual revenue derived by Government per annum by way of vehicles tax ;

(b) the number of districts in the State where R. T. O. Offices are housed in their own buildings ;

(c) the districts where R. T. O. offices are having open space for conducting driving tests ?

SRI M. M. J. SADYOJATHA (Minister for Transport and Minor Irrigation).—

(a) 1976-77 ... Rs. 27.53 Crores.
1977-78 ... Rs. 30.03 Crores.
1978-79 ... Rs. 29.74 Crores.
1979-80 ... Rs. 44.45 Crores.
1980-81 ... Rs. 47.37 Crores.

(b) The R. T. Offices at Belgaum, Gulbarga, Madakeri, Bijapur, Mysore and Mangalore are located in their own building.

(c) The R. T. Offices at Bijapur, Mysore, Gulbarga, Belgaum and Madakeri have space for conducting driving tests.

The space available in the compound of the R. T. Office, Bijapur is sufficient to conduct driving test of all kinds of vehicles, while the space available in the compound of the R. T. Offices at Mysore, Gulbarga, Belgaum and Madakeri is adequate to conduct driving test of two wheelers only.

ಶ್ರೀ ಎಂ. ಎಸ್. ಆತ್ಮಾನಂದ.—ಉತ್ತರದಲ್ಲಿ, ಸಾರಿಗೆ ಇಲಾಖೆಯಲ್ಲಿ ವಾಹನಗಳ ತೆರಿಗೆ ರೂಪದಲ್ಲಿ ೪೭.೩೭ ಕೋಟಿ ರೂಪಾಯಿ ಬರುತ್ತದೆ ಎಂದು ಕೊಟ್ಟಿದ್ದಾರೆ. ಈ ಒಂದು ಆದಾಯದಲ್ಲಿ ಸಾರಿಗೆ ಇಲಾಖೆಯ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಖರ್ಚು ಮಾಡುತ್ತೀರಿ ಎಂದು ಕೇಳಲಿಕ್ಕೆ ಇಷ್ಟ ಪಡುತ್ತೇನೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡುವ ಬಗ್ಗೆ ದೊಡ್ಡ ಪಟ್ಟಿ ಇದೆ, ಅದನ್ನು ಬೇಕಾದರೆ ಒದಗಿಸಿಕೊಡುತ್ತೇನೆ. ಎಲ್ಲೆಲ್ಲಿ ಆಫೀಸ್‌ಗಳ ಕಟ್ಟಡಕ್ಕೆ ಬೇಕೋ ಅಲ್ಲಿ ಹಣವನ್ನು ಒದಗಿಸಿಕೊಟ್ಟಿದ್ದೇವೆ, ಅದನ್ನು ಬೇಕಾದರೆ ಒದಗಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಎಷ್ಟು ಪರ್ಸೆಂಟ್ ಖರ್ಚುಮಾಡುತ್ತೀರಿ ಎಂದು ಕೇಳಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ವರಮಾನದ ಮೇಲೆ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಪರ್ಸೆಂಟೇಜ್ ಖರ್ಚು ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—೦.೧೫ ಪರ್ಸೆಂಟ್ ಖರ್ಚು ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಆತ್ಮಾನಂದ.—ಅಧ್ಯಕ್ಷರೆ, ಈ ಒಂದು ಇಲಾಖೆ ಸರ್ಕಾರದ ಬೊಕ್ಕಸಕ್ಕೆ ಅತಿ ಹೆಚ್ಚಿನ ಆದಾಯವನ್ನು ತರುವ ಇಲಾಖೆಯಾಗಿದೆ. ಈ ಆದಾಯಕ್ಕೆ ಹೋಲಿಸಿ ನೋಡಿದರೆ ಈ ವೆಚ್ಚ ಮಾಡಿರುವುದು ಏನೇನೂ ಸಾಲುವುದಿಲ್ಲ. ಏಕೆಂದರೆ, ಆರ್.ಟಿ.ಓ. ಕಛೇರಿಗಳಿಗೆ ಯಾವ ಒಂದು ಜಿಲ್ಲಾ ಕೇಂದ್ರದಲ್ಲೂ ಸ್ವಂತ ಕಟ್ಟಡಗಳು ಇರುವುದಿಲ್ಲ. ಇದಕ್ಕೆ ಬೆಂಗಳೂರು ಕೂಡ ಹೊರತಲ್ಲಾ ; ಆದುದರಿಂದ ಈ ಆರ್.ಟಿ.ಓ. ಕಟ್ಟಡಗಳನ್ನು ಕಟ್ಟುವ ಯೋಜನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗಾಗಲೇ ಆರ್.ಟಿ.ಓ. ಕಛೇರಿಗಳ ಕಟ್ಟಡಗಳನ್ನು ಕಟ್ಟಲಿಕ್ಕೆ ಯೋಜನೆಗಳನ್ನು ಸಿದ್ಧಮಾಡುತ್ತಾ ಇದ್ದೇವೆ, ಆದಷ್ಟು ಬೇಗ ಅವನ್ನು ತೆಗೆದುಕೊಳ್ಳುತ್ತಾ ಇದ್ದೇವೆ.

ಶ್ರೀ ಎಂ. ಎಸ್. ಆತ್ಮಾನಂದ.—ಮುಂದ್ಯದಲ್ಲಿ ಯಾವಾಗ ಈ ಯೋಜನೆ ತೆಗೆದುಕೊಂಡಿದ್ದೀರಿ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮುಂದ್ಯದಲ್ಲಿ ೨ ಲಕ್ಷದ ೬೦ ಸಾವಿರ ರೂಪಾಯಿಗಳನ್ನು ಈ ವರ್ಷ ನಾವು ಪ್ರೊವೈಡ್ ಮಾಡಿದ್ದೇವೆ.

ಶ್ರೀ ಎಂ. ಎಸ್. ಆತ್ಮಾನಂದ.—ಅಧ್ಯಕ್ಷರೆ, ಮೂರನೇ ಪ್ರಶ್ನೆಗೆ ಉತ್ತರವಾಗಿ, ಕೆಲವು ಆರ್.ಟಿ.ಓ. ಕಛೇರಿಗಳಲ್ಲಿ ಮಾತ್ರ ವಾಹನ ಚಾಲನೆ ಪರೀಕ್ಷೆಗೆ ಸ್ವಂತ ಸ್ಥಳವಿದೆ ಎಂದು ಹೇಳಿದ್ದಾರೆ. ಸದನದಲ್ಲಿ ಹಿಂದೆ ಕೂಡಾ ಈ ಪ್ರಶ್ನೆ ಬಂದಿತ್ತು. ಬಹಳಷ್ಟು ಅಪಘಾತಗಳಾಗುತ್ತಾ ಇವೆ ಎಂದು ಹೇಳಿದ್ದೀವೆ. ಇದೇರೀತಿ ಕಿಷ್ಕಿಂದವಾದ ಜಾಗವಿದ್ದರೆ ಸರಿಯಾಗಿ ವಾಹನಗಳನ್ನು ಪರೀಕ್ಷಿಸದೆ ಫಿಟ್ನೆಸ್ ಸರ್ಟಿಫಿಕೇಟ್ ಕೊಟ್ಟರೆ ಈ ಅಪಘಾತಗಳಿಗೆ ಕಾರಣವಾಗುವುದಿಲ್ಲವೆ. ಆದುದರಿಂದ ಅತೀ ಹೆಚ್ಚಿನ ಜಾಗವನ್ನು ಪಡೆದುಕೊಳ್ಳುವುದಕ್ಕೆ ಏಕೆ ಪ್ರಯತ್ನ ಪಡುವುದಿಲ್ಲ ಎಂದು ಕೇಳುತ್ತಾ ಇದ್ದೇನೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಎಲ್ಲೆಲ್ಲಿ ಓಪನ್ ಸ್ಪೇಸ್ ಇದೆಯೋ ಅಲ್ಲಿ ವಾಹನಗಳನ್ನು ಟೆಸ್ಟ್ ಮಾಡುತ್ತಾ ಇದ್ದಾರೆ ಮತ್ತು ರೋಡಿನಲ್ಲಿ ಕೂಡ ವಾಹನಗಳನ್ನು ಟೆಸ್ಟ್ ಮಾಡುತ್ತಾ ಇದ್ದೇವೆ. ಎಲ್ಲಾದರೂ ನಿರ್ದೇಶನಗಳು ಸಿಕ್ಕಿದರೆ ಅದನ್ನು ಪರಿಶೀಲನೆಮಾಡಿ ತೆಗೆದುಕೊಳ್ಳಲಿಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರದ ಜಯನಗರ ಪ್ರದೇಶದಲ್ಲಿ ಆರ್.ಟಿ.ಓ. ಕಛೇರಿ ಏನಿದೆ ಅದು ಬಹು ಅಂತಸ್ತಿನ ಮಂಹಡಿ ಮೇಲೆ ಇರುವುದರಿಂದ ಜನಗಳಿಗೆ ಹೋಗಿ ಬರುವುದಕ್ಕೆ ತೊಂದರೆ ಯಲ್ಲದೆ, ವಾಹನಗಳನ್ನು ರಸ್ತೆಗಳಲ್ಲಿ ನಿಲ್ಲಿಸಿ ಪಾದಚಾರಿಗಳಿಗೆ ಕೂಡ ತೊಂದರೆಯಾಗಿದೆ. ಆದ್ದರಿಂದ ಅದನ್ನು ಅಲ್ಲಿಂದ ಬದಲಾವಣೆ ಮಾಡಬೇಕು ಎಂದು ಅಲ್ಲಿನ ಜನಗಳಿಂದ ದೂರು ಬಂದಿರುವುದು ನಿಜ ತಾನೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ನನಗೇನೂ ದೂರು ಬಂದಿಲ್ಲ, ಹಾಗೇನಾದರೂ ತೊಂದರೆ ಯಾಗಿದ್ದರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಕಳೆದ ಸಾರಿ ಅವರ ಡಿಮ್ಯಾಂಡ್ಸ್‌ನಲ್ಲಿ, ಯಶವಂತಪುರದ ಬಳಿ ಹೆವಿ ಪೆಹಿಕಲ್ ಟರ್ಮಿನಸ್ ಕಟ್ಟುತ್ತೇವೆಂದು ಹೇಳಿದ್ದರು. ಅದು ಯಾವ ಹಂತದಲ್ಲಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗ ಆ ವಿವರ ನನ್ನ ಹತ್ತಿರ ಇಲ್ಲ, ಒದಗಿಸಿಕೊಡುತ್ತೇನೆ.

Kudregundi Halla Project in Nanjangud Taluk

1127. SRI K.B. SHIVAIAH (Nanjangud).—Will the Minister for Transport and Minor Irrigation be pleased to state :—

(a) whether there is a proposal before the Government to construct Kudregundi Halla Project in Nanjangud taluk, out of the World Bank Assistance ;

(b) whether the plans and estimates for this project have been prepared;

(c) when this project will be commenced?

SRI M.M.J. SADYOJATHA (Minister for Transport and Minor Irrigation).—

(a) Yes.

(b) The plans and estimates are under preparation.

(c) The date of commencement cannot be given at this stage.

ಶ್ರೀ ಕೆ. ಬಿ. ಶಿವಯ್ಯ.—ಈ ಕುದುರೆಗುಂಡಿ ಹಳ್ಳದ ಯೋಜನೆಯ ಅಂದಾಜು ವೆಚ್ಚವನ್ನು ತಿಳಿಸಬೇಕು ಹಾಗೂ ಎಷ್ಟು ಹೆಕ್ಟೇರಿಗೆ ನೀರಾವರಿಯಾಗುತ್ತದೆಂದು ಕೇಳುತ್ತಾ ಇದ್ದೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಇದರಿಂದ ೮೦೦ ಹೆಕ್ಟೇರ್ಸ್‌ಗೆ ನೀರಾವರಿ ಆಗುತ್ತದೆ, ೨ ಕೋಟಿ ರೂಪಾಯಿ ವೆಚ್ಚವಾಗುತ್ತದೆ.

ಶ್ರೀ ಕೆ.ಬಿ. ಶಿವಯ್ಯ.—ನನ್ನ ಇನ್ನೊಂದು ಪ್ರಶ್ನೆಯಲ್ಲಿ 'ಈ ಯೋಜನೆಯನ್ನು ಯಾವಾಗ ಪ್ರಾರಂಭಿಸ ಲಾಗುವುದು, ಎಂದು ಕೇಳಿದ್ದಕ್ಕೆ 'ಈ ಹಂತದಲ್ಲಿ ಪ್ರಾರಂಭ ಮಾಡುವ ದಿನಾಂಕವನ್ನು ನೀಡಲಾಗಲಿಕ್ಕಿಲ್ಲ ಎಂದು ಉತ್ತರಿಸಿದ್ದೀರಿ. ದಯವಿಟ್ಟು ಆದನ್ನು ಯಾವಾಗ ನಿಖರವಾಗಿ ಸರ್ಕಾರ ಮಾಡುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ಕೆಲಸವನ್ನು ಇದೇ ವರ್ಷವೇ ಪ್ರಾರಂಭ ಮಾಡುತ್ತಾ ಇದ್ದೇವೆ.